ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 57 ಜೈಅಯೋ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ.**31.08.2017**.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,
ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ : **2017-18ನೇ** ಸಾಲಿಗೆ ರಾಷ್ಟ್ರೀಯ ಜೈವಾನಿಲ ಗೊಬ್ಬರ ನಿರ್ವಹಣೆ ಯೋಜನೆಯಡಿ(NBMMP) ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ :
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 5-1/2017-ಬಿಜಿ (NBMMP), ದಿನಾಂಕ 30.07.2017.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 5-52014-ಬಿಇ (NBMMP), ದಿನಾಂಕ 30.06.2014.
3. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 19 ಜೈಅಯೋ 2014, ದಿನಾಂಕ 30.07.2014.

ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ನವದೆಹಲಿಯ ಉಲ್ಲೇಖಿತ (1) ಮತ್ತು (2)ರ ಪತ್ರಗಳನ್ವಯ ರಾಷ್ಟ್ರೀಯ ಜೈವಾನಿಲ ಗೊಬ್ಬರ ನಿರ್ವಹಣೆ ಯೋಜನೆಯನ್ನು(NBMMP) **2017-18ನೇ** ಸಾಲಿಗೂ ಸಹ ಮುಂದುವರಿಸಿದೆ.

ಇದರನ್ವಯ ರಾಷ್ಟ್ರೀಯ ಜೈವಾನಿಲ ಗೊಬ್ಬರ ನಿರ್ವಹಣೆ ಯೋಜನೆಯಡಿ **2017-18ನೇ** ಸಾಲಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ವಯ ಆಡಳಿತಾತ್ಮಕ ಅನುಮೋದನೆಯನ್ನು ಹೊರಡಿಸಿದೆ.

## 1. ಉದ್ದೇಶಗಳು:

1.1. ಗ್ರಾಮೀಣ ಮತ್ತು ಅರೆಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿನ ಮನೆಗಳಿಗೆ ಕೌಟುಂಬಿಕ ಗಾತ್ರದ ಜೈವಾನಿಲ ಸ್ಥಾವರಗಳ ನಿರ್ಮಾಣ ಮಾಡಿ, ಪ್ರಧಾನವಾಗಿ ಅಡಿಗೆಗಾಗಿ ಸ್ವಚ್ಛವಾದ ಅನಿಲ ಮತ್ತು ಸಾವಯವ/ಜೈವಿಕ ಗೊಬ್ಬರ ಒದಗಿಸುವುದು.

1.2. ಗ್ರಾಮೀಣ ಪ್ರದೇಶದ ಗ್ರಾಮಿಣ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸುಧಾರಣೆ.

1.3. ಹೊಗೆ ಮತ್ತು ಸೌದೆ ಸಂಗ್ರಹಣೆಯಲ್ಲಿನ ಕಷ್ಟಗಳ ನಿವಾರಣೆ ಮಾಡುವುದು, ಅರಣ್ಯ ನಾಶ ತಪ್ಪಿಸುವುದು ಮತ್ತು ಸಾಮಾಜಿಕ ಮೌಲ್ಯಗಳ ತಿಳುವಳಿಕೆ ನೀಡುವುದು.

1.4. ಜೈವಾನಿಲ ಸ್ಥಾವರದ ಬಗ್ಗಡವನ್ನು ಉಪಯೋಗಿಸಿ, ಸಾವಯವ ಕೃಷಿಗೆ ಉತ್ತೇಜನ ನೀಡುವುದು ಹಾಗೂ ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡುವುದು, ಜೈವಾನಿಲ ಸ್ಥಾವರದ ಬಗ್ಗಡದಿಂದ ಉತ್ತಮ ಎರೆಹುಳು ಗೊಬ್ಬರ ತಯಾರಿಸುವುದು.

1.5. ಜೈವಾನಿಲ ಸ್ಥಾವರಕ್ಕೆ ಶೌಚಾಲಯ ಸಂಪರ್ಕ ಮಾಡಿ ಗ್ರಾಮೀಣ ಪ್ರದೇಶಗಳ ನೈರ್ಮಲ್ಯ ಅಭಿವೃದ್ಧಿ ಪಡಿಸುವುದು.

1.6. ಯೋಜನಾ ಆಯೋಗದ ವರದಿಯಂತೆ 'ಸಮಗ್ರ ಇಂಧನ ಯೋಜನೆ' ಯಡಿ 'ಜೀವನಾಧಾರಿತ ಇಂಧನವನ್ನಾಗಿ ಅಡಿಗೆಗಾಗಿ ಒದಗಿಸಬಹುದಾಗಿದೆ.

1.7. ವಾತಾವರಣಕ್ಕೆ ಇಂಗಾಲ ಮತ್ತು ಮಿಥೇನ್ ಅನಿಲ ನೇರವಾಗಿ ಸೇರುವಿಕೆಯಿಂದಾಗಿ ಉಂಟಾಗುತ್ತಿರುವ ಪರಿಸರ ಮಾಲಿನ್ಯವನ್ನು ಜೈವಾನಿಲ ಸ್ಥಾವರಗಳ ನಿರ್ಮಾಣದಿಂದಾಗಿ ತಡೆಗಟ್ಟಲು ಸಹಕಾರಿಯಾಗುವುದು.

## 2. ಭೌತಿಕ ಗುರಿ:

2.1 **2017-18ನೇ** ಸಾಲಿಗೆ ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ **28** ಜೈಅಯೋ **2017,** ದಿನಾಂಕ **04.07.2017**ರಲ್ಲಿ **8000** ಜೈವಾನಿಲ ಸ್ಥಾವರಗಳ ಭೌತಿಕ ಗುರಿಯನ್ನು ಹಂಚಿಕೆ ಮಾಡಿದೆ (SC Category ಒಳಗೊಂಡಂತೆ).

2.2 ನಿಗದಿಪಡಿಸಿದ ಗುರಿಯನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣ ಪ್ರಮಾಣದಲ್ಲಿ ಸಾಧಿಸಲು ಕ್ರಮವಹಿಸುವುದು ಹಾಗೂ ಹೆಚ್ಚಿನ ಗುರಿಯ ಅವಶ್ಯಕತೆ ಇದ್ದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆದು ಹೆಚ್ಚಿನ ಗುರಿ ಪಡೆದು ಪ್ರಗತಿ ಸಾಧಿಸುವುದು. ಪೂರ್ವಾನುಮತಿ ಪಡೆಯದೇ ಹೆಚ್ಚಿನ ಗುರಿಗಿಂತ ಹೆಚ್ಚಿನ ಪ್ರಗತಿ ಸಾಧಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ಕಾರ್ಯಕ್ರಮದಡಿ ಜವಾಬ್ದಾರರಾಗಿರುತ್ತಾರೆ.

2.3 ನಿಗದಿ ಪಡಿಸಿದ ಭೌತಿಕ ಗುರಿಯನ್ನು ಪೂರ್ಣ ಪ್ರಮಾಣದಲ್ಲಿ ಕಡ್ಡಾಯವಾಗಿ ಸಾಧಿಸುವಲ್ಲಿ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರರನ್ನೇ ಸಂಪೂರ್ಣ ಜವಾಬ್ದಾರರನ್ನಾಗಿ ಮಾಡಿದೆ.

2.4. ಪ್ರಸ್ತುತ ನಿಗದಿಪಡಿಸಿದ ಗುರಿಯನ್ವಯ ಒಂದು ವೇಳೆ ಪೂರ್ಣ ಪ್ರಮಾಣದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗದೇ ಇದ್ದಲ್ಲಿ ಸೂಕ್ತವಾದ ಕಾರಣಗಳೊಂದಿಗೆ **31ನೇ ಅಕ್ಟೋಬರ್ 2017**ರೊಳಗೆ ಸರ್ಕಾರಕ್ಕೆ ಭೌತಿಕ ಗುರಿಯನ್ನು ಹಿಂದಿರುಗಿಸಲು ಕ್ರಮವಹಿಸುವುದು.

## 3. ಸಹಾಯಧನ

ಉಲ್ಲೇಖಿತ (2)ರನ್ವಯ ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ (National Biogas and Manure Management Programme (NBMMP) ದಡಿ ಕೇಂದ್ರ ಸಹಾಯಧನ ಹಾಗೂ ಪೂರಕವಾಗಿ ರಾಜ್ಯ ಸಹಾಯಧನದ ವಿವರಗಳನ್ನು **ಅನುಬಂಧ-1**ರಲ್ಲಿ ವಿವರಿಸಿದೆ.

## 4. ಕಾರ್ಯಕ್ರಮದ ಅನುಷ್ಠಾನ

4.1 ಗುಡ್ಡಗಾಡು ಪ್ರದೇಶಗಳು, ಇಂಧನ ಸಮಸ್ಯೆಯಿರುವ ಪ್ರದೇಶಗಳು ಹಾಗೂ ಅರಣ್ಯ ನಾಶದ ಸಮಸ್ಯೆಗಳಿರುವ ಪ್ರದೇಶಗಳಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡುವುದು.

4.2 ಗ್ರಾಮೀಣ ಮತ್ತು ಅರೆಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿನ ಮನೆಗಳಿಗೆ ಕೌಟುಂಬಿಕ ಗಾತ್ರದ ಜೈವಾನಿಲ ಸ್ಥಾವರಗಳ ನಿರ್ಮಾಣ ಮಾಡಿ ಅಡಿಗೆಗಾಗಿ ಅನಿಲ ಮತ್ತು ಸಾವಯವ/ಜೈವಿಕ ಗೊಬ್ಬರ ಪಡೆಯಲು ಪ್ರೋತ್ಸಾಹಿಸುವುದು.

4.3 ಗ್ರಾಮೀಣ ಜನತೆಗೆ ಸೂಕ್ತ ತಿಳುವಳಿಕೆ ನೀಡುವುದರೊಂದಿಗೆ ಶೌಚಾಲಯ ಸಂಪರ್ಕಿತ ಜೈವಾನಿಲ ಸ್ಥಾವರ ನಿರ್ಮಾಣಕ್ಕೆ ಆದ್ಯತೆ ನೀಡುವುದು.

4.4 ಇಲಾಖಾ ಅನುಷ್ಠಾನಾಧಿಕಾರಿಗಳು ಗ್ರಾಮೀಣ ಜನತೆಯಲ್ಲಿ ಕಾರ್ಯಕ್ರಮದ ಪ್ರಯೋಜನ ಕುರಿತಂತೆ ಉತ್ತೇಜನ, ಅರಿವು ಮೂಡಿಸುವುದು, ಗುಣಮಟ್ಟ ನಿಯಂತ್ರಣ, ತರಬೇತಿ ಮತ್ತು ಉಸ್ತುವಾರಿ ಮುಂತಾದ ಚಟುವಟಿಕೆಗಳ ಕುರಿತು ಸ್ಥಳೀಯ ನಿರ್ಮಾಣವನ್ನು ಟರ್ನ್ ಕೀ ಏಜೆನ್ಸಿಗಳು ಮತ್ತು ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಗಳ ಮುಖಾಂತರ ನಿರ್ಮಿಸಬೇಕಾಗಿರುತ್ತದೆ.

4.5 ಈ ಯೋಜನೆಯು ಜಿಲ್ಲಾ ಪಂಚಾಯತಿ ಕಾರ್ಯಕ್ರಮವಾಗಿದ್ದು, ಯೋಜನೆಯ ಅನುಷ್ಠಾನವನ್ನು ಗ್ರಾಮ ಪಂಚಾಯಿತಿ / ತಾಲ್ಲೂಕು ಪಂಚಾಯಿತಿ / ಕೃಷಿ ಇಲಾಖೆ / ಪಶುಸಂಗೋಪನಾ ಇಲಾಖೆ ಮೂಲಕ ಅನುಷ್ಠಾನಗೊಳಿಸುವುದು. ಸಹಾಯಧನದ ಪ್ರಸ್ತಾವನೆಯನ್ನು ಗ್ರಾಮ ಪಂಚಾಯತ್‌ನ ಮೂಲಕ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸಿ, ನಿಯಮಾನುಸಾರ ಸಹಾಯಧನವನ್ನು ಪಾವತಿಸಲು ಕ್ರಮಕೈಗೊಳ್ಳುವುದು.

4.6 **ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/4/ಜೈಅಯೋ/2001 ದಿನಾಂಕ:27.09.2001** ರನ್ವಯ ದಾಖಲಾತಿಗಳನ್ನು ಪರಿಶೀಲಿಸಿ, ಜಿಲ್ಲಾ ಪಂಚಾಯತ್‌ಗಳೇ ಟರ್ನ್ ಕೀ ಏಜೆನ್ಸಿಗಳ ಪರವಾನಿಗೆಯನ್ನು ನವೀಕರಿಸುವ ಮತ್ತು ಹೊಸದಾಗಿ ನೊಂದಾಯಿಸುವ ಕಾರ್ಯವನ್ನು ನಿರ್ವಹಿಸತಕ್ಕದ್ದು. ಎಲ್ಲಾ ಟರ್ನ್ ಕೀ ಏಜೆನ್ಸಿಗಳ ಹೆಸರು ಮತ್ತು ವಿಳಾಸವನ್ನು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಒದಗಿಸುವುದು.

4.7 ಕಾರ್ಯಕ್ರಮದಡಿ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದು / ಯೋಜನಾ ಅಭಿಯಂತರರು ಅಥವಾ ಟರ್ನ ಕೀ ಏಜೆಂಟುರುಗಳು ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಲ್ಲಿ ಆ ಫಲಾನುಭವಿಗಳ ವಿವರಗಳನ್ನು ಗ್ರಾಮ ಪಂಚಾಯಿತಿ ಗಮನಕ್ಕೆ ತರುವುದು.

**4.8 ಯೋಜನಾ ಅಭಿಯಂತರರು, ಪ್ರತಿ ತಾಲ್ಲೂಕು ಪಂಚಾಯಿತಿಯಲ್ಲಿ (MPIC) ನಡೆಯುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ, ಕಾರ್ಯಕ್ರಮದ ಉಪಯುಕ್ತತೆ ಕುರಿತಂತೆ ಚುನಾಯಿತಾ ಪ್ರತಿನಿಧಿಗಳ ಗಮನಕ್ಕೆ ತಂದು ಗ್ರಾಮೀಣ ಜನತೆಯಲ್ಲಿ ಅರಿವು & ಜಾಗೃತಿ ಮೂಡಿಸಲು ಅಗತ್ಯ ಕ್ರಮವಹಿಸುವುದು.**

4.9 ಫಲಾನುಭವಿಗಳ ಮನೆಯಲ್ಲಿ 2–6 ಜಾನುವಾರು ಹೊಂದಿರುವ ಕುಟುಂಬಗಳಿಗೆ ದೀನ ಬಂಧು ಮಾದರಿಯ ಸಾಮರ್ಥ್ಯ ಮತ್ತು ಗಾತ್ರಕ್ಕನುಗುಣವಾಗಿ ಜೈವಾನಿಲ ಸ್ಥಾವರ ನಿರ್ಮಾಣ ಮಾಡುವುದು.

4.10 ಸ್ಥಾವರಗಳನ್ನು ನಿರ್ಮಿಸುವುದಕ್ಕೆ ಗುಂಡಿಯನ್ನು ತೋಡಿರುವ ಸಮಯದಲ್ಲಿ ನಿರ್ಮಾಣಗೊಳ್ಳುತ್ತಿರುವ ಸ್ಥಾವರಗಳ ಹಾಗೂ ಸ್ಥಾವರ ಪೂರ್ಣಗೊಂಡು ಕಾರ್ಯಾರಂಭವಾದ ಸಮಯದಲ್ಲಿ ಕಾರ್ಯಕ್ರಮದ ಯೋಜನಾ ಅಭಿಯಂತರರು ಸಂಬಂಧಿಸಿದ ಕುಟುಂಬದ ಯಾರಾದರೂ ಸದಸ್ಯರೊಂದಿಗೆ ಪೋಟೋ ತೆಗೆದು ಸಹಾಯಧನದ ಪ್ರಸ್ತಾವನೆಯೊಂದಿಗೆ ಲಗತ್ತಿಸಿ,(ನಮೂನೆ ಲಗತ್ತಿಸಿದೆ) ದಾಖಲೆಗಾಗಿ ಜಿಲ್ಲಾ ಪಂಚಾಯತ್‌ನಲ್ಲಿ ಇಡತಕ್ಕದ್ದು ಹಾಗೂ ಜಿಲ್ಲಾ ಪಂಚಾಯತ್‌ನಿಂದ ಫಲಾನುಭವಿಗಳ ವಿವರಗಳೊಂದಿಗೆ ನಿಗದಿತ ನಮೂನೆಗಳಲ್ಲಿ ಮಾಹಿತಿಗಳನ್ನು ಮೇಲಾಧಿಕಾರಿಗಳು / ಪರಿಶೀಲನಾಧಿಕಾರಿಗಳು ಕೈಗೊಳ್ಳುವ ಪರಿಶೀಲನಾ ವೇಳೆಯಲ್ಲಿ ತಪಾಸಣೆಗೆ ಹಾಜರುಪಡಿಸುವುದು.

4.11 ಫಲಾನುಭವಿಗಳು ಕಡ್ಡಾಯವಾಗಿ ಆಧಾರ್ ಕಾರ್ಡ್ ಸಂಖ್ಯೆ ಹೊಂದಿರತಕ್ಕದ್ದು.

4.12 ಜೈವಾನಿಲ ಸ್ಥಾವರಗಳನ್ನು ಪ್ರಚುರಪಡಿಸುವಾಗ ಪ್ರತಿ ತಾಲ್ಲೂಕಿನಲ್ಲಿ ದುರ್ಗಮ ಮತ್ತು ಸಂಪರ್ಕ ಸಾಧ್ಯವಿಲ್ಲದ ಗ್ರಾಮಗಳಿಗೆ ಆದ್ಯತೆ ನೀಡಿ, ಕೆಲವು ಗ್ರಾಮಗಳನ್ನು ಆಯ್ದುಕೊಂಡು, ಆ ಗ್ರಾಮದಲ್ಲಿಯೇ ಸ್ಥಾವರ ನಿರ್ಮಾಣಕ್ಕೆ ಒತ್ತು ಕೊಡುವುದು. ಹೊಗೆ ರಹಿತ ಗ್ರಾಮಗಳನ್ನಾಗಿ ಘೋಷಿಸುವ ನಿಟ್ಟಿನಲ್ಲಿ ಕ್ರಮವಹಿಸುವುದು.

4.13 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಜೈವಾನಿಲ ಸ್ಥಾವರ ನಿರ್ಮಾಣಕ್ಕಾಗಿ ಪ್ರೋತ್ಸಾಹಿಸುವುದು ಹಾಗೂ ಇನ್ನಿತರ ಯೋಜನೆಗಳ–SCP&TSP Programmeಗಳಡಿ *ಫಲಾನುಭವಿಯ ಪಾಲನ್ನು* ಭರಿಸಲು ಜಿಲ್ಲಾ ಪಂಚಾಯತ್‌ನಿಂದ ಕ್ರಮ ಕೈಗೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿಗದಿತ ಗುರಿ ಸಾಧಿಸುವುದು.

4.14 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಶೇ.22.75% ಅನುದಾನ ನಿಯಮಾನುಸಾರ ವೆಚ್ಚ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.

4.15 ಸಹಾಯಧನ ವಿತರಣಾ ವಹಿಯಲ್ಲಿ ಫಲಾನುಭವಿಗಳ ಸಂಪೂರ್ಣ ವಿಳಾಸವನ್ನು ನಮೂದಿಸಿ, ಅವರ ಛಾಯಾ ಚಿತ್ರವನ್ನು ಪೂರ್ಣಗೊಂಡ ಸ್ಥಾವರದೊಂದಿಗೆ ಪಡೆದು ಅಂಟಿಸತಕ್ಕದ್ದು.

## 5. ಸಹಾಯಧನ ಪಾವತಿಸುವಲ್ಲಿ ಕೈಗೊಳ್ಳಬೇಕಾದ ಕ್ರಮಗಳು :

5.1 ಸರ್ಕಾರದಿಂದ ಬಿಡುಗಡೆ ಮಾಡುವ ಕೇಂದ್ರ ಸಹಾಯಧನವನ್ನು ರಾಜ್ಯ ಸಹಾಯಧನಕ್ಕೆ ಬಳಸಿಕೊಳ್ಳಬಾರದು ಮತ್ತು ರಾಜ್ಯ ಸಹಾಯಧನವನ್ನು ಕೂಡ ಕೇಂದ್ರ ಸಹಾಯಧನ ಪಾವತಿಗಾಗಿ ಬಳಸಿಕೊಳ್ಳಬಾರದು. ಒಂದು ವೇಳೆ ಬಳಸಿಕೊಂಡಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಿಯಮಾನುಸಾರ ಕ್ರಮವಹಿಸಲಾಗುವುದು.

5.2 ಆಯಾ ವರ್ಷದಲ್ಲಿ ಸಾಧಿಸಲಾಗುವ ಭೌತಿಕ ಗುರಿ ಸಾಧನೆಯನ್ವಯ ಬಿಡುಗಡೆಯಾಗುವ ಕೇಂದ್ರ ಮತ್ತು ರಾಜ್ಯ ಸಹಾಯಧನವನ್ನು ಆಯಾ ವರ್ಷಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು. ಆರ್ಥಿಕ ವರ್ಷದಲ್ಲಿ ಸಾಧಿಸಲಾದ ಪ್ರಗತಿಯಂತೆ ಹಣಬಳಕೆ ಪ್ರಮಾಣಪತ್ರ ಮತ್ತು ಸಹಾಯಧನದ ಕ್ಲೈಮುಗಳನ್ನು ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಹಿಂದಿನ ವರ್ಷಗಳ ಬಾಕಿ ಪಾವತಿಗೆ ವಿನಿಯೋಗಿಸತಕ್ಕದ್ದಲ್ಲ.

5.3 ಅನಿಲ ಸ್ಥಾವರಗಳಿಗೆ ಸಹಾಯಧನವನ್ನು ಪಾವತಿಸುವಾಗ ಫಲಾನುಭವಿಗಳ ಪಟ್ಟಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಯಾವುದೇ ಪ್ರಸಂಗದಲ್ಲೂ ಎರಡು ಬಾರಿ ಸಹಾಯಧನ ಪಾವತಿಯಾಗದ ರೀತಿಯಲ್ಲಿ ಎಚ್ಚರಿಕೆ ವಹಿಸತಕ್ಕದ್ದು ಹಾಗೂ ಕೆವಿಐಸಿ ವತಿಯಿಂದ ಮತ್ತು ವಿದೇಶಿ ನೆರವಿನಿಂದ ಸರ್ಕಾರೇತರ ಸಂಘ ಸಂಸ್ಥೆಗಳಿಂದ ಘಟಕ ನಿರ್ಮಿಸಲಾಗುತ್ತಿರುವ ಫಲಾನುಭವಿಗಳ ಪಟ್ಟಿಯೊಂದಿಗೂ ಸಹ ತಾಳೆ ಮಾಡಿ ದೃಢೀಕರಿಸಿಕೊಂಡು ಸಹಾಯಧನ ಪಾವತಿಸಲು ಕ್ರಮ ವಹಿಸುವುದು.

5.4 ಯೋಜನೆಯ ಉಸ್ತುವಾರಿ ನಿರ್ವಹಿಸುತ್ತಿರುವ ಸಗ್ರಾಇಂಕಾ ಯೋಜನಾ ಅಭಿಯಂತರರು ಸ್ಥಾವರಗಳ ನಿರ್ಮಾಣ ಪೂರ್ಣಗೊಂಡು ಕಾರ್ಯಾಚರಣೆ ಕುರಿತಂತೆ ಸ್ಥಾನಿಕ ಪರಿಶೀಲನೆ ಮಾಡಿ, ಸ್ಥಾವರ ಕಾರ್ಯಾರಂಭಗೊಂಡ ಬಗ್ಗೆ ಪರಿಶೀಲನಾ ವರದಿ ಹಾಗೂ ಟರ್ನ್ ಕೀ ಏಜೆನ್ಸಿಗಳಿಂದ ಕಾರ್ಯಾರಂಭಗೊಂಡ ನಂತರದ 5 ವರ್ಷಗಳವರೆಗೆ ಸ್ಥಾವರಗಳ ನಿರ್ವಹಣೆ ಬಗ್ಗೆ ಒಪ್ಪಂದ ಪತ್ರ ಹಾಗೂ ಘಟಕಗಳು ಕಾರ್ಯನಿರ್ವಹಿಸುತ್ತಿರುವ ಕುರಿತು ಗ್ರಾಮ ಪಂಚಾಯತಿಯ ಧೃಢೀಕರಣದೊಂದಿಗೆ ಇದರೊಂದಿಗೆ ಲಗತ್ತಿಸಲಾದ ನಿಗದಿತ ನಮೂನೆಯಲ್ಲಿ ಸಹಾಯಧನ ಪಾವತಿಗಾಗಿ ಜಿಲ್ಲಾ ಪಂಚಾಯತ್‌ಗೆ ಪ್ರಸ್ತಾವನೆ ಸಲ್ಲಿಸುವುದು. (ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿಂತೆ ವಿವರಗಳನ್ನು ಈಗಾಗಲೇ **ಉಲ್ಲೇಖಿತ (3)**ರಲ್ಲಿ ಲಗತ್ತಿಸಲಾದ **ನಮೂನೆ-1 ರಿಂದ ನಮೂನೆ-10ರವರೆಗೆ** ಹಾಗೂ ನಿರ್ಮಿಸಿಕೊಳ್ಳುವ ಕುರಿತು ಅರ್ಜಿ, ಸಹಾಯಧನ ಪಾವತಿಸುವ ಕುರಿತುಂತೆ ಜಿಲ್ಲಾ ಪಂಚಾಯತಿಗೆ, ಗ್ರಾಮ ಪಂಚಾಯತಿ ವತಿಯಿಂದ ನೀಡುವ ಪತ್ರದ ನಮೂನೆ).

5.5 ಸಹಾಯಧನವನ್ನು ಪಾವತಿಸುವ ಪೂರ್ವದಲ್ಲಿ ಈ ಹಿಂದೆ ನಿರ್ಮಿಸಿಕೊಂಡಿರುವ ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿ, ಈ ಹಿಂದೆ ಸಹಾಯಧನ ನೀಡದಿರುವ ಬಗ್ಗೆ ಧೃಢೀಕರಿಸಿಕೊಳ್ಳುವುದು ಹಾಗೂ ಫಲಾನುಭವಿಯಿಂದ ಈ ಹಿಂದೆ ಸದರಿ ಸ್ಥಾವರಕ್ಕೆ ಸಹಾಯಧನ ಪಡೆದಿರುವುದಿಲ್ಲವೆಂದು ಹಾಗೂ ಮುಂದೆಯೂ ಸಹಾ ಯಾವುದೇ ಮೂಲಗಳಿಂದ ಸಹಾಯಧನವನ್ನು ಪಡೆಯುವುದಿಲ್ಲವೆಂದು ಹಾಗೂ ಸ್ಥಾವರದ ಉಪಯೋಗವನ್ನು ನಿರಂತರ ಪಡೆಯುತ್ತೇನೆಂದು ಪ್ರಮಾಣಪತ್ರ ಪಡೆಯುವುದು.

5.6 ಫಲಾನುಭವಿಗಳ ವಿವರಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿನ **ಅನುಬಂಧ-11**ರಲ್ಲಿ MNRE/RDPR/ZP/GP ವಾರು ವೆಬ್‌ಸೈಟಿಗೆ ಅಪ್ ಲೋಡ್ ಮಾಡಿ, ಡಾಕ್ಯುಮೆಂಟ್ ರಿಜಿಸ್ಟರ್‌ನಲ್ಲಿ ಕ್ರಮ ಸಂಖ್ಯೆಯನ್ನು ನೊಂದಾಯಿಸಿ, ಜಿಲ್ಲಾ ಪಂಚಾಯತ್‌ನಲ್ಲಿ ಕಡ್ಡಾಯವಾಗಿ ನಿರ್ವಹಿಸತಕ್ಕದ್ದು. MNRE/RDPR ವೆಬ್‌ಸೈಟಿಗೆ ಫಲಾನುಭವಿಗಳ ವಿವರಗಳನ್ನು ಅಪ್‌ಲೋಡ್ ಮಾಡಿದ ಷರತ್ತಿನ ಮೇಲೆ ಮುಂದಿನ ಸಹಾಯಧನ ಬಿಡುಗಡೆ ಮಾಡಲಾಗುವುದು.

5.7 ಟರ್ನ್ ಕೀ ಏಜೆಂಟ್‌ಗಳಿಗೆ ಬ್ಯಾಂಕ್/ಡಿ.ಡಿ./ಇ.ಸಿ.ಎಸ್. ಮೂಲಕ ಟರ್ನ್ ಕೀ ಫೀಯನ್ನು ಪಾವತಿಸುವುದು. ನಿರ್ಮಾಣಗೊಂಡಿರುವ ಅನಿಲ ಸ್ಥಾವರಗಳ ಸಹಾಯಧನ ಪ್ರಸ್ತಾವನೆ ಹಾಗೂ ಜಿ.ಪಿ.ಎಸ್. ಆಧಾರಿತ ಮೂರು ಹಂತದ ಛಾಯಾ ಚಿತ್ರಗಳನ್ನು <u>ಗಾಂಧಿ ಸಾಕ್ಷಿ ಕಾಯಕದಲ್ಲಿ</u> ಅಳವಡಿಸಿದ ನಂತರವೇ ಸಹಾಯಧನವನ್ನು ಬಿಡುಗಡೆ ಮಾಡತಕ್ಕದ್ದು.

5.8 2016–17ನೇ ಸಾಲಿನಿಂದ ಕಾರ್ಯಕ್ರಮದಡಿ ಕೇಂದ್ರ ಸಹಾಯಧನವನ್ನು ECS ಮುಖೇನಾ ಕಾರ್ಯಕ್ರಮದ ಉಳಿತಾಯ ಖಾತೆಗೆ ಬಿಡುಗಡೆ ಮಾಡಲಾಗುತ್ತಿದೆ. ಈ ರೀತಿ ಬಿಡುಗಡೆ ಮಾಡುವ ಅನುದಾನಕ್ಕೆ ವೆಚ್ಚ ಭರಿಸಿರುವ ಕುರಿತಂತೆ <u>ಪ್ರತಿ ತ್ರೈಮಾಸಿಕದಲ್ಲಿ ಉಳಿತಾಯ ಖಾತೆಯ ಬ್ಯಾಂಕ್ Statement ಪ್ರತಿಯನ್ನು ಮುಖ್ಯ ಲೆಕ್ಕಾಧಿಕಾರಿಗಳು ದೃಢೀಕರಿಸಿ ತಪ್ಪದೇ ಸರ್ಕಾರಕ್ಕೆ ನೀಡುವುದು.</u>

**ವಿಶೇಷ ಸೂಚನೆ:**

1. ಜಿಲ್ಲಾ ಪಂಚಾಯತ್‌ಗಳಿಂದ ಟರ್ನ್ ಕೀ ಫೀಯನ್ನು ಪಾವತಿಸುವಾಗ ಅನಿಲ ಸ್ಥಾವರಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಂಡು ಯಾವುದೇ ಕಾರಣಕ್ಕೂ ಆಯಾ ಸಾಲಿನ ಕೇಂದ್ರ ಸಹಾಯಧನದೊಂದಿಗೆ ಟರ್ನ್ ಕೀ ಫೀಯನ್ನು ಸಹಾ Annexure- IV ರಲ್ಲಿರುವಂತೆ ಪಾವತಿಸತಕ್ಕದ್ದು ಹಾಗೂ ಟರ್ನ್ ಕೀ ಫೀಯನ್ನು ಬಾಕಿ ಉಳಿಸಿಕೊಳ್ಳತಕ್ಕದ್ದಲ್ಲ.
2. ಫ್ಲೆಕ್ಸಿ ಮಾದರಿಯ ಸ್ಥಾವರಗಳಿಗೆ, ಸಂಪೂರ್ಣ ಪ್ರಿ–ಫ್ಯಾಬ್ರಿಕೇಟೆಡ್/ ಉತ್ಪಾದಿತ (ಕಾಲಕಾಲಕ್ಕೆ ಅನುಮೋದಿತ) ಮಾದರಿಗಳಿಗೆ ಜೈವಾನಿಲ ಸ್ಥಾವರಗಳಿಗೆ ಟರ್ನ್ ಕೀ ಫೀಯನ್ನು ನೀಡಲಾಗುವುದಿಲ್ಲ. ಉದಾ: ಬ್ಯಾಗ್ ಟೈಪ್ ಪ್ಲಾಂಟ್ಸ್/HDPE/PVC/fabric materials ಟರ್ನ್ ಕೀ ಫೀಯನ್ನು ಪಾವತಿಸಲು ಅವಕಾಶವಿರುವುದಿಲ್ಲ.

## 6. ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ರಚನೆ:

ಕಾರ್ಯಕ್ರಮವನ್ನು ನಿಗದಿತ ಅವಧಿಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು ರಚಿಸಿದೆ.

| | | |
|---|---|---|
| 1 | ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿ, | ಸದಸ್ಯರು |
| 3 | ಎಲ್ಲಾ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರು, | ಸದಸ್ಯರು |
| 4 | ಎಲ್ಲಾ ಸಹಾಯಕ ನಿರ್ದೇಶಕರು, ಪಶು ಸಂಗೋಪನ ಇಲಾಖೆ, | ಸದಸ್ಯರು |
| 5 | ಯೋಜನಾ ಅಭಿಯಂತರರು(ಸಗ್ರಾಇಂಕಾ) | ಸದಸ್ಯ ಕಾರ್ಯದರ್ಶಿ |
| ಸರ್ಕಾರೇತರ ಏಜೆನ್ಸಿ | | |
| 6 | ಅನುಮೋದಿತ ಜಿಲ್ಲಾ ಜೈವಾನಿಲ ಟರ್ನ್ ಕೀ ಏಜೆನ್ಸಿಗಳು | ಸದಸ್ಯರು |

ಮಾರ್ಗಸೂಚಿ ಹೊರಡಿಸಿದ 15 ದಿನಗಳೊಳಗಾಗಿ ಸಮಿತಿಯನ್ನು ರಚಿಸಿ, ಸರ್ಕಾರಕ್ಕೆ ವರದಿ ನೀಡುವುದು. ಸದರಿ ಸಮಿತಿಯು ಕಾಲಕಾಲಕ್ಕೆ ಸಭೆ ಸೇರಿ ಮಾಸಿಕ ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳುವುದು ಮತ್ತು ಪ್ರಗತಿ ಸಾಧಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಸಲಹೆ, ಸೂಚನೆಗಳ ಶಿಫಾರಸ್ಸು ಮಾಡುವುದು ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯವಾಗಿರುತ್ತದೆ. ಮುಖ್ಯವಾಗಿ ಸಮಿತಿಯ ಸಲಹೆ, ಶಿಫಾರಸ್ಸುಗಳ ನಿರ್ಧಾರಗಳನ್ನು ಎಂ.ಎನ್.ಆರ್.ಇ.ಗೆ ಕಳುಹಿಸಲು ಸರ್ಕಾರಕ್ಕೆ ಸಲ್ಲಿಸುವುದು.

## 7. ಜೈವಾನಿಲ ಸ್ಥಾವರಗಳ ನಿರ್ಮಾಣಕ್ಕಾಗಿ ಬ್ಯಾಂಕಗಳಿಂದ ಸಾಲ ಪಡೆಯುವಿಕೆ:

ರಾಷ್ಟ್ರೀಕೃತ ಬ್ಯಾಂಕ್‌ಗಳು, ನಬಾರ್ಡ್, ಗ್ರಾಮೀಣ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳ ವಿಭಾಗೀಯ ಗ್ರಾಮೀಣ ಬ್ಯಾಂಕ್‌ಗಳಿಂದ ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ (National Biogas and Manure Management Programme (NBMMP) ಯೋಜನೆ ಅನುಷ್ಠಾನಕ್ಕಾಗಿ ಜೈವಾನಿಲ ಸ್ಥಾವರಗಳ ನಿರ್ಮಾಣಕ್ಕೆ ಸಾಲ ಒದಗಿಸಬೇಕಾಗಿರುತ್ತದೆ. SND/SNAs/KVIC ಗಳಿಂದ ವಿವಿಧ ಗಾತ್ರಗಳ ಜೈವಾನಿಲ ಸ್ಥಾವರಗಳ ನಿರ್ಮಾಣಕ್ಕೆ ಘಟಕ ವೆಚ್ಚವನ್ನು ನಿರ್ಧರಿಸಿ, ಲೀಡ್ ಬ್ಯಾಂಕ್ ಮುಖಾಂತರ ಎಲ್ಲಾ ಬ್ಯಾಂಕ್‌ಗಳು ಫಲಾನುಭವಿಗಳಿಗೆ ಸಾಲ ಒದಗಿಸುವ ಏರ್ಪಾಡು ಮಾಡುವುದು.

## 8. ಪ್ರಚಾರ ಕಾರ್ಯಕ್ರಮ :

ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ (National Biogas and Manure Management Programme (NBMMP)ದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಕರಪತ್ರ, ಫೋಲ್ಡರ್ಸ್‌ಗಳನ್ನು ವಿತರಿಸುವುದರ ಜೊತೆಗೆ ಸಭೆ, ಸಮಾರಂಭಗಳು, ಬಾನುಲಿ, ದೂರದರ್ಶನ ಮುಂತಾದ ಪ್ರಚಾರಕ್ಕಾಗಿ ಸಮೂಹ ಮಾಧ್ಯಮಗಳನ್ನು ಬಳಸಿಕೊಳ್ಳುವುದು. ಸದರಿ ಪ್ರಚಾರಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಸಹಾಯಧನದಡಿ ಮಾತ್ರ ಭರಿಸತಕ್ಕದ್ದು. ಅನುಷ್ಠಾನಾಧಿಕಾರಿಗಳು ಮತ್ತು ಟರ್ನ್ ಕೀ ಏಜೆನ್ಸಿಗಳು, ಎಸ್.ಎನ್.ಡಿ.ಗಳು ಮಾದರಿ ಪ್ರಚಾರ ಸಾಮಗ್ರಿಗಳನ್ನು ಅಂದರೆ ಪೋಸ್ಟರ್ಸ್‌ಗಳು, ಬುಕ್‌ಲೆಟ್‌ಗಳು, ಕರಪತ್ರಗಳು, ಸ್ಥಾವರ ನಿರ್ವಹಣೆಗಾಗಿ Do & Don'ts, ಇತ್ಯಾದಿ ಮಾದರಿಗಳನ್ನು ತಯಾರಿಸುವುದು.

ಪ್ರತಿ ತಾಲ್ಲೂಕಿನ ತಾಲ್ಲೂಕು ಪಂಚಾಯತ್‌ಗಳಲ್ಲಿ ಪ್ರಚಾರಕ್ಕಾಗಿ ಜೈವಾನಿಲ ಉಪಯೋಗದಾರರ ಸೇವಾ ಕೇಂದ್ರ ಸ್ಥಾಪಿಸುವುದು. ಅಲ್ಲಿ ಯೋಜನೆಯ ಮಾಹಿತಿ, ಸ್ಥಾವರಗಳ ನಿರ್ವಹಣೆ, ಸ್ಥಾವರಗಳ ಬಿಡಿಭಾಗಗಳು, ಪ್ರಚಾರ ಸಾಮಗ್ರಿಗಳು, ಐ.ಎಸ್.ಐ. ಮಾರ್ಕ್‌ನ ಸ್ಟೋವ್‌ಗಳ ಮಾದರಿ ಪ್ರದರ್ಶನ, ಪ್ರತಿ ಜೈವಾನಿಲ ಸ್ಥಾವರದ ಫಲಾನುಭವಿಗಳಿಗೆ 5 ವರ್ಷ ವಾರಂಟಿ ಸೇವೆಗಾಗಿ ಕನಿಷ್ಠ 10ಕಾರ್ಡ್‌ಗಳನ್ನು ದೂರು ನೀಡಲು ವಿತರಿಸುವುದು. ಕಾರ್ಡ್‌ನಲ್ಲಿ ಫಲಾನುಭವಿಯ ಹೆಸರು, ಸ್ಥಾವರ ನಿರ್ಮಾಣ ಮಾಡಿದ ದಿನಾಂಕ, ಟರ್ನ್ ಕೀ ಏಜೆನ್ಸಿಯ ದೂರವಾಣಿ, ಮೊಬೈಲ್ ಸಂಖ್ಯೆ, ವಿಳಾಸ, ವಾರಂಟಿ, ಅವಧಿ ಇತ್ಯಾದಿ ಎಲ್ಲಾ ವಿವರಗಳನ್ನು ಒಳಗೊಂಡಿರತಕ್ಕದ್ದು. ದೂರು ಸ್ವೀಕೃತಿಯ ನಂತರ ನಿರ್ದಿಷ್ಠ ಅವಧಿಯೊಳಗಾಗಿ ಸಂಬಂಧಿಸಿದ ಟರ್ನ್ ಕೀ ಏಜೆನ್ಸಿಗಳು ದುರಸ್ತಿ ಕಾರ್ಯ ಕೈಗೊಳ್ಳತಕ್ಕದ್ದು.

## 9. ಹಳೆ ಸ್ಥಾವರಗಳ ದುರಸ್ತಿ ಕೆಲಸಕ್ಕೆ ಸಹಾಯಧನ :

ಹಳೆಯದಾದ ಮತ್ತು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿರುವ ಜೈವಾನಿಲ ಸ್ಥಾವರಗಳ ದುರಸ್ತಿಗಾಗಿ 2017-18ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ದುರಸ್ತಿಗಾಗಿ ಸಹಾಯಧನ ನೀಡುತ್ತದೆ. 5 ವರ್ಷಗಳಿಗೂ ಮೇಲ್ಪಟ್ಟು ಹಳೆಯದಾದ ಮತ್ತು ಕಟ್ಟಡ ದುರಸ್ತಿಯ ಕಾರಣದಿಂದ ಸ್ಥಗಿತಗೊಂಡ ಸ್ಥಾವರಗಳಿಗೆ ಹೊಸದಾಗಿ ಸ್ಥಾವರ ನಿರ್ಮಿಸಲು ಲಭ್ಯವಿರುವ ಕೇಂದ್ರ ಸಹಾಯಧನದ ಶೇ.50% ದುರಸ್ತಿಗಾಗಿ ಸಹಾಯಧನದ ರೂಪದಲ್ಲಿ ನೀಡುತ್ತದೆ. ಇದಕ್ಕಾಗಿ ದುರಸ್ತಿ ವೆಚ್ಚದ ಶೇ.50ರಷ್ಟನ್ನು ಫಲಾನುಭವಿಗಳು ತಮ್ಮ ಪಾಲನ್ನು ಭರಿಸಲು ಒಪ್ಪಿಗೆ ಸೂಚಿಸಬೇಕಾಗುತ್ತದೆ. ಹೀಗೆ ದುರಸ್ತಿ ಮಾಡಬೇಕಾದ ಸ್ಥಾವರಗಳ ಪಟ್ಟಿಯನ್ನು ಸ್ಥಾನಿಕ ಪರಿಶೀಲನೆ ಮಾಡಿ ವಿವರಗಳನ್ನು ಅಂದರೆ ಪಲಾನುಭವಿಯ ಹೆಸರು, ಗ್ರಾಮ, ಗ್ರಾಮ ಪಂಚಾಯತ್, ತಾಲ್ಲೂಕು, ಜಿಲ್ಲೆ, ಸ್ಥಾವರ ನಿರ್ಮಿಸಿದ ವರ್ಷ, ದುರಸ್ತಿಯ ವಿವರಗಳು, ಫಲಾನುಭವಿಯ ಪಾಲು ಇತ್ಯಾದಿ ವಿವರಗಳನ್ನು ಚಾಲ್ತಿಯಲ್ಲಿರುವ ನಮೂನೆಗಳಲ್ಲಿ ಭರ್ತಿ ಮಾಡಿ, ಜಿಲ್ಲೆಗಳಿಂದ ಕ್ರೋಡೀಕೃತ ಪಟ್ಟಿಯನ್ನು ಒಂದೇ ಕಂತಿನಲ್ಲಿ ಜನವರಿ ಅಂತ್ಯದೊಳಗಾಗಿ ಸರ್ಕಾರಕ್ಕೆ ಸಲ್ಲಿಸಿದಲ್ಲಿ, ಕೇಂದ್ರ ಸರ್ಕಾರದಿಂದ ಮುಂಗಡ ಅನುದಾನ ಪಡೆಯಲು ಕ್ರಮ ಕೈಗೊಳ್ಳಲಾಗುವುದು. *ಯಾವುದೇ ಕಾರಣಕ್ಕೂ ಕೇಂದ್ರ ಸರ್ಕಾರದ ಪೂರ್ವಾನುಮತಿಯಿಲ್ಲದೇ ದುರಸ್ತಿ ಕಾರ್ಯಕ್ಕೆಗೊಳ್ಳಲು ಅವಕಾಶವಿರುವುದಿಲ್ಲ.*

## 10. ಜೈವಾನಿಲ ಉಪಕರಣಗಳನ್ನು ಬಳಸುವ ಬಗ್ಗೆ :

ಕೇಂದ್ರ ಸರ್ಕಾರದ ಸೂಚನೆಯಂತೆ ಜೈವಾನಿಲ ಸ್ಟೋವ್‌ಗಳು ಐ.ಎಸ್.ಐ ಮಾರ್ಕ್‌ನ ಉತ್ತಮ ಗುಣಮಟ್ಟ ಹೊಂದಿರುವ ಒಂದು ಅಥವಾ 2 ಗ್ಯಾಸ್ ಬರ್ನರ್‌ಗಳನ್ನು ಒಳಗೊಂಡಿರತಕ್ಕದ್ದು. ಇಂತಹ ಬರ್ನರ್‌ಗಳು ಶೇ.55 % ಶಾಖ ಉತ್ಪನ್ನತೆಯ ಕಾರ್ಯಕ್ಷಮತೆಯನ್ನು ಹೊಂದಿರತಕ್ಕದ್ದು. ಇದೇ ರೀತಿ ಸ್ಥಾವರ ನಿರ್ಮಾಣಕ್ಕೆ ಉಪಯೋಗಿಸುವ ವಸ್ತುಗಳು ಉತ್ತಮ ಗುಣಮಟ್ಟ ಹೊಂದಿದ್ದು, ಬಹುಕಾಲ ಬಾಳಿಕೆ ಬರುವಂತಿರಬೇಕು.

## 11. ದಾಖಲಾತಿ ನಿರ್ವಹಣೆ: ಮಾದರಿ ವಿವರಗಳು;

### ದಾಖಲಾತಿ ನಿರ್ವಹಣೆ:

ಜೈವಾನಿಲ ಸ್ಥಾವರಗಳ ನಿರ್ಮಾಣಕ್ಕಾಗಿ ಸಹಾಯಧನ ಬಿಡುಗಡೆಗಾಗಿ ರಾಜ್ಯದಲ್ಲಿ ಏಕರೂಪದ ನಮೂನೆಗಳನ್ನು ಅಳವಡಿಸಲು ಉದ್ದೇಶಿಸಿದ್ದು, ಸಲ್ಲಿಸಬೇಕಾದ ನಮೂನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಕಡ್ಡಾಯವಾಗಿ ಸದರಿ ನಮೂನೆಗಳನ್ನು ಸಹಾಯಧನ ಬಿಡುಗಡೆಗಾಗಿ ನೀಡುವ ಪ್ರಸ್ತಾವನೆಗಳಿಗಾಗಿ ಉಪಯೋಗಿಸತಕ್ಕದ್ದು. ಜಿಲ್ಲಾ ಪಂಚಾಯತ್‌ಗಳಲ್ಲಿ ಹಾಗೂ ಟರ್ನ್ ಕೀ ಏಜೆನ್ಸಿಗಳು ರೆಜಿಸ್ಟರ್‌ನಲ್ಲಿ ಲಗತ್ತಿಸಿದ Annexure-XI ರಲ್ಲಿರುವಂತೆ ನಿರ್ಮಿಸಿದ ಸ್ಥಾವರದ ಕ್ರಮಸಂಖ್ಯೆ, ಮಾದರಿ, ಫಲಾನುಭವಿ ಹೆಸರು, ದಿನಾಂಕ, ವರ್ಷ, ಟರ್ನ್ ಕೀ ಏಜೆನ್ಸಿಯ ಹೆಸರು ಮತ್ತು ವಿಳಾಸ, ಪಾವತಿಸಿದ ಕೇಂದ್ರ ಮತ್ತು ರಾಜ್ಯ ಸಹಾಯಧನದ ವಿವರಗಳು, ಇತ್ಯಾದಿಗಳನ್ನು ಕಚೇರಿ ದಾಖಲಾತಿ ಪುಸ್ತಕದಲ್ಲಿ ನಮೂದಿಸತಕ್ಕದ್ದು. ಸ್ಥಾವರದ ಮೇಲೆ ಕ್ರಮಾಂಕ, ಟರ್ನ್ ಕೀ ಏಜೆನ್ಸಿ ಹೆಸರು, ವರ್ಷ ನಮೂದಿಸುವುದು.

### ಮಾದರಿ ವಿವರಗಳು;

**2017–18ನೇ ಸಾಲಿಗೆ ಅನುಮೋದಿತ ಮಾದರಿಗಳು ಮತ್ತು ಜೈವಾನಿಲ ಸ್ಥಾವರ ಗಾತ್ರದ ವಿವರಗಳು:**

| ಕ್ರ. ಸಂ | ಅನುಮೋದಿತ ಮಾದರಿ– ಗಾತ್ರ 2 ರಿಂದ 6 ಕ್ಯು.ಮೀ. | ವಿನ್ಯಾಸಗಳು/ಎಂ.ಎನ್.ಆರ್.ಇ ಪತ್ರ & ಅನುಮೋದಿತ ದಿನಾಂಕ: |
|---|---|---|
| 1 | Fixed Dome ಜೈವಾನಿಲ ಸ್ಥಾವರಗಳು:<br>1.ಧೀನಬಂಧು ಫಿಕ್ಸೆಡ್ ಡೂಮ್ ಮಾದರಿ – ಇಟ್ಟಿಗೆ ಕಟ್ಟಡದ ಮಾದರಿ.<br>2.ಧೀನಬಂಧು ಫೆರ್ರೋ ಸಿಮೆಂಟ್ ಮಾದರಿ– in-situ ಕಟ್ಟಡದ ಮಾದರಿ.<br>3.ಪ್ರಿ ಫ್ಯಾಬ್ರಿಕೇಟೆಡ್ RCC-fixed Dome ಮಾದರಿ. | MNRE Ir.No.13–10/96–BG dt.10-1-2002.<br>Code of Practices (Second Revision), IS 9478:1989 of the BIS, New Delhi.<br>MNRE Ir.No.13–11/99–BG dt.05-3-1999. |
| 2 | Floating Dome Design Biogas Plants:<br>1.KVIC floating steel metal dome with brick masonary digester.<br>2.KVIC floating type plant with Ferro Cement digester and FRP gas holder.<br>3.Pragathi Model Biogas Plants. | Code of Practices (Second Revision), IS 9478:1989 of the BIS, New Delhi.<br>Code of Practices IS 12986:1990 of the BIS, New Delhi.<br>Code of Practices (Second Revision), IS 9478:1989 of the BIS, New Delhi. |

| | | |
|---|---|---|
| 3 | Prefabricated model Biogas Plants:<br>1.Prefabricated RCC Digester with KVIC floating drum. | MNRE ltr. No.13-1/2007-BE dt.29-2-2008. |
| 4 | Bag type Biogas Plants:<br>1.Flexi model: | MNRE ltr. No.7-39/89-BG dt.14-07-1995. |
| 5 | HDPE/FRP/RCC Material and based on KVIC design floating type biogas plants of one to six cubic meter capacity are approved under NBMM Programme | MNRE ltr No : 18/1 2014 BE Dated 26.11.2014 |

## 12. ಸರ್ಕಾರಕ್ಕೆ ಪ್ರಗತಿ ವರದಿ ಸಲ್ಲಿಸುವ ಬಗ್ಗೆ;

ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ (National Biogas and Manure Management Programme (NBMMP)ದ ಮಾಸಿಕ ವರದಿಯನ್ನು Annexure-IX ರಲ್ಲಿರುವಂತೆ ಮತ್ತು Annexure-Xರಲ್ಲಿರುವಂತೆ ತ್ರೈಮಾಸಿಕ ಪ್ರಗತಿ ವರದಿಯ ನಮೂನೆಗಳನ್ನು ಈ ಪತ್ರದೊಂದಿಗೆ ಅನುಬಂಧಗಳಲ್ಲಿ ಲಗತ್ತಿಸಿದ್ದು, ಸದರಿ ನಿಗದಿತ ನಮೂನೆಗಳಲ್ಲಿ ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ಫಲಾನುಭವಿಗಳ ಪಟ್ಟಿಯೊಂದಿಗೆ ಎಲ್ಲಾ ಗ್ರಾಮ ಪಂಚಾಯತ್‌ಗಳಿಂದ ಕ್ರೋಢೀಕರಿಸಿ, ಎಲ್ಲಾ ಜಿಲ್ಲಾ ಪಂಚಾಯತ್‌ಗಳ ವೆಬ್‌ಸೈಟಿನಲ್ಲಿ ಅಳವಡಿಸುವುದು, ಇ-ಮೇಲ್ ಮತ್ತು ಅಂಚೆ ಮೂಲಕ ಪ್ರಗತಿ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ತರಬೇತಿ ಮತ್ತು ಪ್ರಚಾರದ ಕಾರ್ಯಕ್ರಮಗಳ ವಿವರವನ್ನು ಸರ್ಕಾರಕ್ಕೆ ಕಳುಹಿಸುವುದು.

## 13. ಹಣಬಳಕೆ ಪ್ರಮಾಣಪತ್ರವನ್ನು ಮತ್ತು ಸಹಾಯಧನದ ಕ್ಲೈಮುಗಳನ್ನು ನಿಗದಿತ ನಮೂನೆಗಳಲ್ಲಿ ಸಿ.ಎ. ಆಡಿಟ್ ವರದಿಯೊಂದಿಗೆ ಸಲ್ಲಿಸುವ ಬಗ್ಗೆ;

Annexure- III ರಲ್ಲಿರುವಂತೆ ಸರ್ಕಾರದಿಂದ ಹೊರಡಿಸಲಾಗುವ ಆದೇಶ, ಸುತ್ತೋಲೆ, ಪತ್ರಗಳನ್ವಯ ಹಣಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾ ಪಂಚಾಯತ್-ಉಪ ಕಾರ್ಯದರ್ಶಿ(ಅಭಿವೃದ್ಧಿ), ಮುಖ್ಯ ಲೆಕ್ಕಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಹಿಯೊಂದಿಗೆ ನಿಗದಿತ ನಮೂನೆಗಳಲ್ಲಿ ತಯಾರಿಸಿ, ಸಿ.ಎ.ಆಡಿಟ್ ವರದಿಯೊಂದಿಗೆ ಸರ್ಕಾರಕ್ಕೆ ನಿಗದಿತ ಸಮಯ ದೊಳಗಾಗಿ ಸಲ್ಲಿಸತಕ್ಕದ್ದು ಹಾಗೂ **2017-18ನೇ** ಸಾಲಿನ ಹಣಬಳಕೆ ಪ್ರಮಾಣ ಪತ್ರವನ್ನು ಸಿ.ಎ.ಆಡಿಟ್ ವರದಿಯೊಂದಿಗೆ ನಿಗದಿತ ನಮೂನೆಗಳಲ್ಲಿ *ದಿನಾಂಕ **15.06.2018ರೊಳಗಾಗಿ** ಸಲ್ಲಿಸಲು ಕ್ರಮವಹಿಸುವುದು.*

_ಹಿಂದಿನ ವರ್ಷದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದ ಅಂತಿಮ ಶಿಲ್ಕು ಮೊತ್ತವನ್ನು, ಮುಂದಿನ ವರ್ಷದ ಆರಂಭ ಶಿಲ್ಕನ್ನಾಗಿ ಬದಲಾವಣೆ ಮಾಡದೇ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ಬಿಡುಗಡೆಯಾದ ಅನುದಾನ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನವನ್ನು ಪ್ರತ್ಯೇಕವಾಗಿ ನಮೂದಿಸುವುದು. ಹಣ ಸಂದಾಯ ಮಾಡಿದ ಬಗ್ಗೆ ವರ್ಷಾವಾರು ಪ್ರತ್ಯೇಕವಾಗಿ ನಮೂನೆಗಳಲ್ಲಿ ತಿಳಿಸಿದಂತೆ ಮಾಹಿತಿಗಳನ್ನು ಸಲ್ಲಿಸುವುದು. ಸಿ.ಎ. ಆಡಿಟ್ ವರದಿಯಲ್ಲಿನ ಅಂಕಿ-ಅಂಶಗಳಿಗೆ ಹಣ ಬಳಕೆ ಪ್ರಮಾಣ ಪತ್ರದಲ್ಲಿನ ಮಾಹಿತಿಗಳಿಗೆ ಹೊಂದಾಣಿಕೆಯಾಗಿರತಕ್ಕದ್ದು. ಕಾರ್ಯಕ್ರಮದ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ಆಯಾ ವರ್ಷದಲ್ಲಿ ಅನುಷ್ಠಾನಗೊಳಿಸಲಾದ ಜೈವಾನಿಲ ಸ್ಥಾವರಗಳಿಗೆ ಟರ್ನ್ ಕೀ ಫೀಯನ್ನು (ಸರ್ಕಾರದ **ಸುತ್ತೋಲೆ ಸಂಖ್ಯೆ: ಗ್ರಾಅಪ/4/ಜೈಅಯೋ/2001 ದಿನಾಂಕ 29.09.2001** ರಲ್ಲಿ ಸೂಚಿಸಲಾದಂತೆ) ಕಡ್ಡಾಯವಾಗಿ ಪಾವತಿಸುವುದು. ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ನಿಗದಿತ ನಮೂನೆಯಲ್ಲಿ ಫಲಾನುಭವಿಗಳ ಕ್ರೋಡೀಕೃತ ಪಟ್ಟಿಯನ್ನು ವೆಚ್ಚಕ್ಕನುಗುಣವಾಗಿ ವರ್ಷಾವಾರು ಪ್ರತ್ಯೇಕವಾಗಿ ಪಟ್ಟಿಮಾಡಿ ಸಲ್ಲಿಸುವುದು.

## ಆಯವ್ಯಯ

**2017–18ನೇ** ಸಾಲಿನ ಆಯವ್ಯಯದ **ಲೆಕ್ಕ ಶೀರ್ಷಿಕೆ: 2810–60–196–6–01(ಯೋಜನೆ)**ರಡಿ ಕೇಂದ್ರ ಹಾಗೂ ರಾಜ್ಯ ಪಾಲಿನಡಿ **ರೂ.1214.00ಲಕ್ಷಗಳನ್ನು** ಹಾಗೂ ಅನಿಲ ಯೋಜನೆ **ಲೆಕ್ಕ ಶೀರ್ಷಿಕೆ 2810–01–001–0–03ರಡಿ ರೂ.150.00ಲಕ್ಷಗಳನ್ನು** ನಿಗದಿಪಡಿಸಿದೆ. ಸದರಿ ಲೆಕ್ಕ ಶೀರ್ಷಿಕೆಗಳಡಿ ಬಿಡುಗಡೆ ಮಾಡುವ ಅನುದಾನವನ್ನು ಆಯಾ ಲೆಕ್ಕ ಶೀರ್ಷಿಕೆಯಡಿ ವೆಚ್ಚ ಭರಿಸತಕ್ಕದ್ದು.

ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಆದೇಶ, ಸುತ್ತೋಲೆಗಳನ್ವಯ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

ಗ್ರಾಮೀಣ ಇಂಧನ ಕಾರ್ಯಕ್ರಮದ ಉಸ್ತುವಾರಿ ನಿರ್ವಹಿಸುತ್ತಿರುವ ಯೋಜನಾ ಅಭಿಯಂತರರು (ಸಗ್ರಾಇಂಕಾ) ಕಾರ್ಯಕ್ರಮದ ಅನುಷ್ಠಾನದಲ್ಲಿ ಪ್ರಾಥಮಿಕ ಹಂತದಿಂದ ಕಾರ್ಯಾಚರಣೆ ಹಂತದವರೆಗೆ ಸಂಪೂರ್ಣವಾಗಿ ಜವಾಬ್ದಾರಾಗಿರುತ್ತಾರೆ.

ತಮ್ಮ ವಿಶ್ವಾಸಿ,

(ಎನ್. ಕೃಷ್ಣಪ್ಪ ಕೋಡಿಪಾಳ್ಯ)
ನಿರ್ದೇಶಕರು (ಗ್ರಾಮೂಸೌ–2) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪ ಕಾರ್ಯದರ್ಶಿ (ಅಭಿವೃದ್ಧಿ) ಮತ್ತು ಮುಖ್ಯ ಲೆಕ್ಕಾಧಿಕಾರಿಗಳಿಗೆ.
3. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು–ಸ.ಗ್ರಾಇಂ.ಕಾ.
4. ನಿರ್ದೇಶಕರು, ಕೃಷಿ ನಿರ್ದೇಶನಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಂಟಿ ಕೃಷಿ ಅಧಿಕಾರಿಗಳು, ಕೃಷಿ ಇಲಾಖೆ,
6. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ,
7. ಉಪ ಜನರಲ್ ಮ್ಯಾನೇಜರ್, ನಬಾರ್ಡ್, ಜೀವನ ಪ್ರಕಾಶ ಅನೆಕ್ಸ್, 113–1, ಜೆ.ಸಿ.ರೋಡ್, ಬೆಂಗಳೂರು.
8. ಸಮನ್ವಯ ಅಧಿಕಾರಿ, ಪ್ರಾದೇಶಿಕ ಜೈವಾನಿಲ ಅಭಿವೃದ್ಧಿ ತರಬೇತಿ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು–560 024.
9. ವಿಶೇಷಾಧಿಕಾರಿಗಳು (ಜಿಲ್ಲಾ ಪಂಚಾಯತ್) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಇವರ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
13. ಹೆಚ್ಚಿನ ಪ್ರತಿಗಳು ಕಡತಕ್ಕೆ

# ಅನುಬಂಧ –1

## ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮ

(ದಿನಾಂಕ 08.05.2014 ರಿಂದ ಅನ್ವಯವಾಗುವಂತೆ)

## 2017–18ನೇ ಸಾಲಿನ ಕೇಂದ್ರ ಹಾಗೂ ರಾಜ್ಯ ಸಹಾಯಧನದ ವಿವರ( ರೂ.ಗಳಲ್ಲಿ)

| ಕ್ರ. ಸಂ | ಕೇಂದ್ರ ಸರ್ಕಾರದ ಸಹಾಯಧನದ ವಿವರಗಳು | ಅನುಮೋದಿತ ಮಾದರಿಯ ಜೈವಾನಿಲ ಸ್ಥಾವರ ನಿರ್ಮಾಣಕ್ಕಾಗಿ ಲಭ್ಯವಾಗುವ ಸಹಾಯಧನ ಮತ್ತು ಟರ್ನ್ ಕೀ ಫೀ (ರೂ.ಗಳಲ್ಲಿ) | |
|---|---|---|---|
| | | 1 ಕ್ಯುಮೀ | 2 ರಿಂದ 6 ಕ್ಯುಮೀ. |
| 1 | ಸಾಮಾನ್ಯ ವರ್ಗದ ಫಲಾನುಭವಿಗಳಿಗೆ | 5500 | 9000 |
| | SC/ST ವರ್ಗದ ಫಲಾನುಭವಿಗಳಿಗೆ | 7000 | 11000 |
| | ಶೌಚಾಲಯ ಸಂಪರ್ಕಿತ ಘಟಕಗಳಿಗೆ(ಹೆಚ್ಚುವರಿ ಸಹಾಯಧನ) | 1200 | 1200 |
| 2 | ರಾಜ್ಯ ಸಹಾಯಧನ | 1500 | 3500 |
| 3 | **ಟರ್ನ್ ಕೀ ಏಜೆನ್ಸಿಗಳಿಗೆ ಟರ್ನ್ ಕೀ ಫೀ ಪಾವತಿ:** | | |
| | ಮೊದಲನೇ ವರ್ಷಕ್ಕೆ : ಟರ್ನ್ ಕೀ ಫೀ | 1000 | 1000 |
| | 5ನೇ ವರ್ಷಕ್ಕೆ : ಬಾಕಿ ನಿರ್ವಹಣಾ ವೆಚ್ಚ | 500 | 500 |
| | **ಒಟ್ಟು ಟರ್ನ್ ಕೀ ಫೀ** | **1500** | **1500** |

(ಎನ್. ಕೃಷ್ಣಪ್ಪ ಕೋಡಿಪಾಳ್ಯ)
ನಿರ್ದೇಶಕರು (ಗ್ರಾಮೂಸೌ–2) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ